# ಶ್ರೀಮಾತೆ - ಒಂದು ತತ್ತ್ವ

ಸ್ವಾಮಿ ರಾಘವೇಶಾನಂದ

ಶ್ರೀಮಾತೆ ಶಾರದಾದೇವಿಯವರ ಆಧ್ಯಾತ್ಮಿಕ ಶ್ರೇಷ್ಠತೆ ಹಾಗೂ ದಿವ್ಯತೆಯ ಮಾತೃಭಾವ ಪೂರ್ಣಪ್ರಮಾಣದಲ್ಲಿ ಪ್ರಕಟವಾದುದು ಶ್ರೀರಾಮಕೃಷ್ಣರು ಅವರಿಗೆ 'ಷೋಡಶೀಪೂಜೆ' ಮಾಡಿದ ಸಂದರ್ಭದಲ್ಲಿ. ಪ್ರಪಂಚದ ಇತಿಹಾಸದಲ್ಲಿ ಹಿಂದೆಂದೂ ಕಂಡು ಕೇಳರಿಯದ ಈ ಅಸಾಧಾರಣ ಘಟನೆಯನ್ನು ಕುರಿತು ವಿವರಿಸಿರುವ ಲೇಖಕರು, ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಉತ್ತಮ ಬರಹಗಾರರೂ ಆಗಿದ್ದಾರೆ; ಅನೇಕ ಉತ್ತಮ ಗ್ರಂಥಗಳನ್ನು ಅವರು ರಚಿಸಿದ್ದಾರೆ.

ವೇದಾಂತದಲ್ಲಿ ತತ್ತ್ವ ಎಂದರೆ ಬ್ರಹ್ಮ ಎಂಬ ಅರ್ಥವುಂಟು. ಅಂದರೆ ಶ್ರೀಮಾತೆ ಎಂದರೆ ಬ್ರಹ್ಮ ಸ್ವರೂಪಿಣಿ ಎಂದರ್ಥ. ಶ್ರೀರಾಮಕೃಷ್ಣರು ಬ್ರಹ್ಮಸ್ವರೂಪರು. ಇದನ್ನು ಶ್ರೀರಾಮಕೃಷ್ಣರೇ ಹಲವು ಬಾರಿ, ಹಲವು ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಶ್ರೀಮಾತೆಯೂ ಬ್ರಹ್ಮ ಸ್ವರೂಪಿಣಿ. ಕಾರಣ ಶ್ರೀಮಾತೆ ಹಾಗೂ ಶ್ರೀರಾಮಕೃಷ್ಣರು ಬೇರೆ ಬೇರೆಯಲ್ಲ. ಒಮ್ಮೆ ಸ್ವಾಮಿ ಅಭೇದಾನಂದರು ಶ್ರೀಶಾರದಾದೇವಿಯವರ ಬಳಿಗೆ ಬಂದು, ''ಅಮ್ಮಾ, ನಾನು ನಿಮ್ಮ ಮೇಲೆ ಒಂದು ಸ್ತೋತ್ರ ರಚಿಸಿದ್ದೇನೆ. ಅದನ್ನು ನಾನು ನಿಮ್ಮ ಮುಂದೆ ಓದಬೇಕೆಂದು ಆಸೆಯಾಗಿದೆ'' ಎಂದರು.

ಶ್ರೀಮಾತೆ ಮೊದಲು, '' ನನ್ನ ಮೇಲೆ ಏಕೆ ಸ್ತೋತ್ರ?'' ಎಂದರೂ ಕೊನೆಗೆ ಸ್ವಾಮಿ ಅಭೇದಾನಂದರ ಇಚ್ಛೆ ಪೂರೈಸಲು, ಅವರ ಮುಂದೆ ಕಣ್ಣುಮುಚ್ಚಿ ಕುಳಿತು ಓದಲು ತಿಳಿಸಿದರು. ಆ ಸ್ತೋತ್ರದಲ್ಲಿನ, 'ತದ್ಭಾವರಂಜಿತಾಕಾರಾಂ', ಎಂಬುದನ್ನು ಹೇಳಿ, ತಲೆಯೆತ್ತಿ ನೋಡಿ ದರೆ, ಶ್ರೀಮಾತೆಯ ಸ್ಥಳದಲ್ಲಿ ಶ್ರೀರಾಮಕೃಷ್ಣರು ಆವಿರ್ಭವಿಸಿದ್ದರು. ಆಶ್ಚರ್ಯಚಕಿತರಾಗಿ ಸ್ವಾಮಿ ಅಭೇದಾನಂದರು ಆ ಸ್ತೋತ್ರವನ್ನು ಓದಿ ಮುಗಿಸಿದರು. ನಂತರ ಶ್ರೀಮಾತೆ ಅವರಿಗೆ ದೇವಿಯಾಗಿ ಗೋಚರಿಸಿ, ''ನಿನ್ನ ನಾಲಿಗೆಯಲ್ಲಿ ವಿದ್ಯಾಸ್ವರೂಪಿಣಿಯಾದ ಸರಸ್ವತಿ ನೆಲೆಸಲಿ'' ಎಂದು ಆಶೀರ್ವದಿಸಿದರು. ಇಂದು ಆ ಸ್ತೋತ್ರವೇ **'ಪ್ರಕೃತಿಂ ಪರಮಾಂ'** ಸ್ತೋತ್ರವೆಂದು ಅತಿ ಪ್ರಸಿದ್ಧವಾಗಿ, ಎಲ್ಲರೂ ಅದನ್ನು ಹಾಡುತ್ತಾರೆ.

ಶ್ರೀರಾಮಕೃಷ್ಣರ ಜೀವನದಲ್ಲಿ ಶ್ರೀಮಾತೆಯವರು ಮೂರು ಮುಖ್ಯ ಪಾತ್ರವನ್ನು ವಹಿಸಿದರು.

ಮೊದಲನೆಯದು ಅವರ ಶಿಷ್ಯೆಯಾಗಿ, ಎರಡನೆಯದು ಅವರ ಧರ್ಮಪತ್ನಿಯಾಗಿ, ಮೂರನೆಯದು ಅವರಿಗೆ ದೇವಿಯಾಗಿ. ಈ ಮೂರೂ ಪಾತ್ರಗಳನ್ನು ಅವರು ಶ್ರೀರಾಮಕೃಷ್ಣರೊಡನೆ ಮದುವೆಯಾದ ಮೇಲೆ ನಿರ್ವಹಿಸಿದರು.

ಅವರ ಶಿಷ್ಯೆಯಾಗಿದ್ದಾಗ ಶ್ರೀರಾಮಕೃಷ್ಣರು ಅವರಿಗೆ ಲೌಕಿಕ ಹಾಗೂ ಆಧ್ಯಾತ್ಮಿಕ ವಿದ್ಯೆಯಲ್ಲಿ ಪೂರ್ಣ ಪರಿಣತಿ ಕೊಟ್ಟಿದ್ದರು. ಶ್ರೀಮಾತೆಯವರೇ ಮುಂದಿನ ದಿನಗಳಲ್ಲಿ ತಮ್ಮ ಸರಳಭಾಷೆಯಲ್ಲಿ, ಶ್ರೀರಾಮಕೃಷ್ಣರು ತಮಗೆ ಹೇಗೆ ತರಬೇತಿಯನ್ನು ಕೊಡುತ್ತಿದ್ದರು



ಎಂಬುದನ್ನು ಹೇಳುತ್ತಾರೆ: ''ಅವರು ನನಗೆ ಹತ್ತಿಯಿಂದ ದೇವರ ದೀಪಕ್ಕೆ ಬತ್ತಿ ಮಾಡುವುದು ಹೇಗೆ ಎಂಬುದನ್ನು ಕಲಿಸಿಕೊಟ್ಟಿದ್ದರು. ಮನೆಯ ಬಂಧುಗಳೊಡನೆ ಯಾರು ಯಾರೊಡನೆ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಹೇಳಿದ್ದರು'' ಇತ್ಯಾದಿ.

ಅದು ಮಾತ್ರವಲ್ಲ, ದಿನ ಕಳೆದಂತೆ ಭಕ್ತಿಗೀತೆಗಳನ್ನು ಹಾಡುವುದು ಹೇಗೆ? ಧ್ಯಾನ ಮಾಡುವುದು ಹೇಗೆ? ಸಮಾಧಿ ಸ್ಥಿತಿ ತಲುಪುವುದು ಹೇಗೆ ಮುಂತಾದವುಗಳನ್ನು ಹೇಳಿಕೊಟ್ಟಿದ್ದರು. ಹೀಗೆ ವ್ಯಾವಹಾರಿಕ ವಿಷಯಗಳಿಂದ ಹಿಡಿದು, ಆಧ್ಯಾತ್ಮಿಕ ನೆಲೆಯಲ್ಲಿ ಅತ್ಯುತ್ತಮ ಸಮಾಧಿಸ್ಥಿತಿಯಲ್ಲಿ ಇರುವಂತೆ ಮಾಡಿದ್ದರು. ಇಂತಹ ಪತಿ, ಗುರು ಎಲ್ಲಿ ದೊರೆತಾರು?

ಪತ್ನಿಯಾಗಿ ಶ್ರೀಮಾತೆ ಶ್ರೀರಾಮಕೃಷ್ಣರ ಸೇವೆಯನ್ನು ಪರಿಪೂರ್ಣವಾಗಿ, ಪೂರ್ಣಮನಸ್ಸಿನಿಂದ ಮಾಡಿ ಮೆಚ್ಚುಗೆ ಪಡೆದಿದ್ದರು. ಹಾಗೆ ನೋಡಿದಾಗ ಅವರಿಬ್ಬರೂ ಆದರ್ಶ ದಂಪತಿಗಳಾಗಿದ್ದರು.

ಅವರಿಬ್ಬರೂ ಒಬ್ಬರನ್ನೊಬ್ಬರು ಪರಸ್ಪರ ಪರೀಕ್ಷೆ ಮಾಡಿಕೊಂಡು, ಇಬ್ಬರಲ್ಲಿ ಕೂಡ ಒಂದು ಕಿಂಚಿತ್ತೂ ಕಾಮಭಾವನೆ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡಿದ್ದರು. ನಮಗೆಲ್ಲಾ ಅವರ ಜೀವನಚರಿತ್ರೆಯ ಪರಿಚಯವಿದೆ. ಆದರೂ ನೆನಪಿಸಿಕೊಳ್ಳಲು ಹೇಳುವುದಾದರೆ, ಒಮ್ಮೆ ಶ್ರೀರಾಮಕೃಷ್ಣರು, ಶ್ರೀಮಾತೆಯವರು ತಮ್ಮ ಕಾಲೊತ್ತುವ ಸೇವೆ ಯನ್ನು ಮಾಡುತ್ತಿದ್ದಾಗ, ''ನೋಡು, ನೀನು ದಕ್ಷಿಣೇಶ್ವರಕ್ಕೆ ಬಂದಿರು ವುದು ನನ್ನನ್ನು ಪ್ರಾಪಂಚಿಕ ಜೀವನಕ್ಕೆ ಎಳೆಯಲಿಕ್ಕೋಸ್ಕರವೆ?'' ಎಂದು ನೇರವಾಗಿ ಕೇಳಿದರು.

ಒಂದು ಕ್ಷಣವೂ ಸಂದೇಹಕ್ಕೊಳಗಾಗದೆ ಶ್ರೀಮಾತೆ ಹೇಳಿದರು, ''ನಾನು ಹಾಗೇಕೆ ಮಾಡಲಿ? ನಿಮ್ಮ ದೈವಿಕ ಸಾಧನೆಯಲ್ಲಿ ಸಹಾಯ ಮಾಡಲಷ್ಟೇ ನಾನು ಬಂದಿರುವುದು'' ಎಂದರು. ಎಂತಹ ದೈವಿಕ, ಸಾತ್ವಿಕ ಉತ್ತರ! ಶ್ರೀರಾಮಕೃಷ್ಣರು ಸಮಾಧಾನದ ನಿಟ್ಟುಸಿರು ಬಿಟ್ಟರು. ಏನೇ ಆದರೂ ಅವರು ಜವಾಬ್ದಾರಿಯುತ ಪತಿಯಾಗಿ ದ್ದರು. ಮದುವೆಯಾದ ದಿವಸದಿಂದ ತಾನು ಸ್ವತಂತ್ರ ವ್ಯಕ್ತಿಯಲ್ಲ, ತನ್ನ ಪತ್ನಿಯ ಜವಾಬ್ದಾರಿಯೂ ತನ್ನ ಮೇಲಿದೆ ಎಂಬುದರ ಅರಿವು ಅವರಿಗಿತ್ತು. ಆದುದರಿಂದ ಮುಂದೆ ತಾನು ಏನು ಮಾಡಿದರೂ ಶ್ರೀಮಾತೆಗೆ ಅಭ್ಯಂತರವಿಲ್ಲದಂತೆ ಇರಬೇಕು ಎನ್ನುವ ಮನೋಭಾವ ವಿತ್ತು. ಈ ರೀತಿ ಇಲ್ಲಿಗೇ ಮುಗಿಯಲಿಲ್ಲ. ಈ ಅಸಾಧಾರಣ ಪತ್ನಿ ಒಂದು ದಿನ ತನ್ನ ಪತಿಯ ಕಾಲನ್ನು ಒತ್ತುತ್ತಾ ಇರುವಾಗ ಮೃದು ಧ್ವನಿಯಲ್ಲಿ ಪತಿಗೆ ಒಂದು ಪ್ರಶ್ನೆಯನ್ನು ಹಾಕಿದಳು, ''ಸ್ವಾಮಿ, ತಾವು ನನ್ನನ್ನು ಯಾವ ದೃಷ್ಟಿಯಿಂದ ಕಾಣುತ್ತೀರಿ?

ಒಂದು ಕ್ಷಣವೂ ತಡವರಿಸದೆ ಶ್ರೀರಾಮಕೃಷ್ಣರು ಉತ್ತರಿಸಿದರು, ''ಓ ಅದಾ! ದಕ್ಷಿಣೇಶ್ವರದ ದೇವಸ್ಥಾನದಲ್ಲಿ ಪೂಜಿಸಲ್ಪಡುವ ಮಹಾ ಕಾಳಿಯೂ, ನಹಬತ್ತಿನಲ್ಲಿ ನನಗೆ ಜನ್ಮ ಕೊಟ್ಟಿರುವ ನನ್ನ ತಾಯಿ, ಈಗ ನನ್ನ ಕಾಲೊತ್ತುತ್ತಿರುವ ನೀನು, ಮೂವರೂ ಒಂದೇ. ನಿಜವಾಗಿ ಹಾಗೂ ಸತ್ಯವಾಗಿ ನೀನು ಜಗನ್ಮಾತೆಯ ಆವಿರ್ಭಾವ.'' ಇದು ಶ್ರೀರಾಮಕೃಷ್ಣರ ನಿಲುವಾಗಿತ್ತು. ಆದ್ದರಿಂದಲೇ ಮುಂದೆ ಅವ ರಿಂದ ಶ್ರೀಮಾತೆ ಪೂಜಿಸಲ್ಪಟ್ಟರು.

ಶ್ರೀರಾಮಕೃಷ್ಣರ ಈ ಭಾವ ಶ್ರೀಮಾತೆಯವರಿಗೆ ತುಂಬಾ ಇಷ್ಟ ವಾಯಿತು. ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥ ಮಾಡಿಕೊಂಡರು. ಹಾಗೂ ಅವರ ಜೀವನ ಪರಸ್ಪರ ಪೂರ್ಣ ನಂಬಿಕೆ ಯಿಂದ ಹಾಗೂ ನಿಷ್ಕಾಮ ಪ್ರೀತಿಯಿಂದ ಸುಂದರವಾಗಿ ರೂಪು ಗೊಂಡಿತು.

ನಾವು ಮುಂದಿನ ಘಟ್ಟಕ್ಕೆ ಬರೋಣ, ಅದು ಶ್ರೀಮಾತೆಯ ಮೂರನೇ ಪಾತ್ರವಾದ ಶ್ರೀರಾಮಕೃಷ್ಣರ ಆರಾಧ್ಯಮೂರ್ತಿಯಾದ ದೇವಿಯಾಗಿ. ಶ್ರೀರಾಮಕೃಷ್ಣರು ಶಾರದಾದೇವಿಯವರ ಮೇಲೆ ದೇವಿಯನ್ನು ಆರೋಪಿಸಿ ಪೂಜೆ ಮಾಡಲಿಲ್ಲ. ಶ್ರೀಮಾತೆ ಸಾಕ್ಷಾತ್ ಜಗನ್ಮಾತೆಯೇ ಆಗಿದ್ದರು.

ಶ್ರೀಮಾತೆಯವರ ಜನನಕ್ಕೆ ಮುಂಚೆ ಅವರ ತಂದೆ ತಾಯಿಗಳಿ ಗಾದ ಅಪೂರ್ವ ಅನುಭವ, ಶ್ರೀಮಾತೆ ಸಾಕ್ಷಾತ್ ಜಗನ್ಮಾತೆಯ ಅವ ತಾರವೇ ಎನ್ನುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ರಾಮಚಂದ್ರ ಮುಖರ್ಜಿ ಹಾಗೂ ಶ್ಯಾಮಾಸುಂದರಿ ದೇವಿ ಶ್ರೀಮಾತೆಗೆ ಜನ್ಮಕೊಟ್ಟ ದಂಪತಿಗಳು. ಇವರಿಬ್ಬರೂ ಬಡವರಾದರೂ ಸಕಲ ಸದ್ಗುಣ ಸಂಪನ್ನರು, ಭಗವದ್ಭಕ್ತರು. ಆದುದರಿಂದಲೇ ಜಗ ನ್ಮಾತೆ ತನ್ನ ಆವಿರ್ಭಾವಕ್ಕೆ ಇವರನ್ನೇ ಆರಿಸಿಕೊಂಡಿದ್ದಳು. ಅಸಾ ಮಾನ್ಯ ಘಟನೆಗಳ ಮೂಲಕ ಜಗನ್ಮಾತೆ ತನ್ನ ಆವಿರ್ಭಾವಕ್ಕೆ ಮುನ್ಸೂ ಚನೆ ಕೊಡುತ್ತಾಳೆ. ಒಂದು ದಿನ ಶ್ಯಾಮಾಸುಂದರೀದೇವಿ ತನ್ನ ತವರೂರಾದ ಸಿಹೋರಿನ ಜಾತ್ರೆಗೆ ಹೋಗಿದ್ದಳು. ಅವಳು ಅಲ್ಲಿನ ದೇವಸ್ಥಾನದ ಬಳಿಯಲ್ಲಿನ ಒಂದು ಬಿಲ್ವದ ಮರದ ಕೆಳಗೆ ಕುಳಿ ತಿದ್ದಳು. ಆ ವೇಳೆಗೆ ಸರಿಯಾಗಿ ಆ ಬಿಲ್ವದ ಮರದ ಮೇಲಿನಿಂದ ಕೆಂಪು ರೇಷ್ಮೆ ಸೀರೆಯುಟ್ಟ ಸುಮಾರು ಐದಾರು ವರ್ಷದ ಒಬ್ಬಳು ಪುಟ್ಟ ಬಾಲಕಿ, ಕಾಲಿನ ಗೆಜ್ಜೆಯ ಸದ್ದುಮಾಡುತ್ತಾ ಕೆಳಗಿಳಿದು ಬಂದಳು. ಬಂದವಳೇ ತನ್ನ ಮೃದುವಾದ ತೋಳುಗಳಿಂದ ಶ್ಯಾಮಾಸುಂದ ರಿಯ ಕೊರಳನ್ನು ತಬ್ಬಿಕೊಂಡಳು. ಆಗ ಶ್ಯಾಮಾಸುಂದರಿಯ ಬಾಹ್ಯ ಪ್ರಜ್ಞೆಯು ತಪ್ಪಿತು. ಹೀಗೆಯೇ ಎಷ್ಟು ಹೊತ್ತು ಕಳೆಯಿತೋ ತಿಳಿಯ ಲಿಲ್ಲ. ಕೊನೆಗೆ ಅವಳ ಬಂಧುಗಳು ಬಂದು ಅವಳನ್ನು ಮನೆಗೆ ಕರೆ ತಂದು ಶೈತ್ಯೋಪಚಾರ ಮಾಡಿದ ಮೇಲೆ ಅವಳಿಗೆ ಬಾಹ್ಯಪ್ರಜ್ಞೆ ಮರಳಿತು. ಆಗ ಅವಳಿಗೆ ಆ ಪುಟ್ಟಬಾಲಕಿ ತನ್ನ ಉದರದೊಳಗೆ ಪ್ರವೇಶ ಮಾಡಿರುವಂತೆ ಅನ್ನಿಸಿತು. ಅವಳು ಆನಂದ ಪರವಶಳಾದಳು.

ಆ ಸಮಯದಲ್ಲೇ ರಾಮಚಂದ್ರ ಮುಖರ್ಜಿ ಕೆಲಸ ಹುಡುಕಿ ಕೊಂಡು ಕಲ್ಕತ್ತೆಗೆ ಬಂದಿದ್ದ. ಅವನು ಒಂದು ದಿನ ನಿದ್ರೆಯ ಜೊಂಪಿ ನಲ್ಲಿದ್ದ. ಆಗ ಅವನಿಗೆ ಒಂದು ಅಪೂರ್ವ ಸ್ವಪ್ನವಾಯಿತು. ಆ ಸ್ವಪ್ನ ದಲ್ಲಿ ಸುವರ್ಣದಂತಹ ಮೈಬಣ್ಣದ ಒಬ್ಬಳು ಅಪೂರ್ವ ಸುಂದರಿ ಯಾದ ಬಾಲಕಿ ಅವನ ಬಳಿಸಾರಿ, ತನ್ನ ಪುಟ್ಟ ಪುಟ್ಟ ತೋಳುಗಳಿಂದ ಅವನ ಕೊರಳನ್ನು ತಬ್ಬಿಕೊಂಡಳು. ಅವಳ ದಿವ್ಯ ಸೌಂದರ್ಯ, ಅವಳ ಮೈ ಮೇಲಿನ ದಿವ್ಯಾಭರಣ ಇವುಗಳನ್ನು ಕಂಡು ಅವಳು ಸಾಮಾನ್ಯ ಬಾಲಕಿಯಲ್ಲ, ಸಾಕ್ಷಾತ್ ದೇವಿಯೇ ಎಂದೆನಿಸಿತು ರಾಮಚಂದ್ರ ಮುಖರ್ಜಿಗೆ. ಆ ಭವ್ಯದೃಶ್ಯವನ್ನು ಕಂಡು ಚಕಿತನಾದ ಅವನು ಆ ಬಾಲಕಿಯನ್ನು ಕೇಳುತ್ತಾನೆ: ''ಮಗು, ಯಾರು ನೀನು?'' ಅದಕ್ಕೆ ಆ ಬಾಲಕಿ ತನ್ನ ಅತ್ಯಂತ ಮೃದು ಮಧುರ ಕಂಠದಿಂದ ಹೇಳುತ್ತಾಳೆ: ''ನಾನು ನಿನ್ನ ಮನೆಗೆ ಬರುತ್ತೇನೆ.'' ಅಂದರೆ ಜಗನ್ಮಾತೆ ಶಾರದೆಯ ರೂಪದಲ್ಲಿ ಬರಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಳೆ?

ಜಗನ್ಮಾತೆಯೇ ಶಾರದೆಯ ರೂಪದಲ್ಲಿ ಬಂದಿದ್ದಾಳೆಂಬುದನ್ನು ಸೂಚಿಸುವ ಮತ್ತೊಂದು ಘಟನೆ: ಆಗ ಶಾರದೆಗೆ ಸುಮಾರು ಹದಿ ಮೂರು ವರ್ಷ. ಅವಳು ಕಾಮಾರಪುಕುರದ ಪತಿಯ ಮನೆಗೆ ಬಂದಿ ದ್ದಾಳೆ. ಕಾಮಾರಪುಕುರದಲ್ಲಿ ಸ್ನಾನಕ್ಕೆ ಮನೆಯಿಂದ ಸ್ವಲ್ಪ ದೂರದ ಲ್ಲಿರುವ ಹಾಲದಾರ್ ಪುಕುರ್ ಎಂಬ ಕೆರೆಗೆ ಹೋಗಬೇಕಾಗಿತ್ತು.

ಆಗಿನ ಕಾಲದಲ್ಲಿ ಮನೆತನಸ್ಥ ಮಹಿಳೆಯರು ಏಕಾಂಗಿಯಾಗಿ ತಿರುಗುವ ಸಂಪ್ರದಾಯ ಇರಲಿಲ್ಲ. ಸಾಲದ್ದಕ್ಕೆ ಬಾಲಕಿ ಶಾರದೆ ತುಂಬಾ ಲಜ್ಜೆಯ ಸ್ವಭಾವದವಳು. ಏಕಾಂಗಿಯಾಗಿ ಹೋಗುವುದು ಹೇಗೆ ಎಂದು ಯೋಚಿಸುತ್ತಾ ಮನೆಯ ಮುಂದೆ ನಿಂತಳು. ಹೀಗೆಯೇ ಯೋಚಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಎಲ್ಲಿಂದಲೋ ಎಂಟು ಜನ ಯುವತಿಯರು ಕಾಣಿಸಿಕೊಂಡರು. ಸರಿ, ಶಾರದೆ ಅವರ ಜೊತೆ ಹೊರಡಲು ತಯಾರಾದಳು. ಆ ಯುವತಿಯರಲ್ಲಿ ನಾಲ್ಕು ಜನ ಶ್ರೀಮಾತೆಯ ಮುಂದಿನಿಂದ ನಡೆದರೆ, ಇನ್ನು ನಾಲ್ಕು ಜನ ಹಿಂದಿನಿಂದ ನಡೆದರು. ಹೀಗೆ ಶಾರದೆಗೆ ಮೈಗಾವಲಾಗಿ ಈ ಎಂಟು ಜನ ಯುವತಿಯರು ಪ್ರತಿದಿನ ಅವಳ ಜೊತೆಯಲ್ಲಿ ಸ್ನಾನಕ್ಕೆ ಬರುತ್ತಿದ್ದರು. ಸ್ನಾನ ಮುಗಿದ ಮೇಲೆ ಜೊತೆಯಲ್ಲೇ ಮನೆಗೆ ಬರುತ್ತಿದ್ದರು. ಆ ಮೇಲೆ ಎತ್ತ ಹೋಗುತ್ತಿದ್ದರೋ ಯಾರಿಗೂ ತಿಳಿಯದು. ಶಾರದೆಗೆ ಆಗಾಗ ಅನ್ನಿಸುತ್ತಿತ್ತು; 'ದಿನವೂ ಹೀಗೆ ನನ್ನ ಜೊತೆಗೆ ಈ ಎಂಟು ಜನ ಯುವತಿಯರು ಸ್ನಾನಕ್ಕೆ ಬರುತ್ತಿದ್ದಾರಲ್ಲ, ಯಾರಿರಬಹುದು ಇವರು?' ಎಂದು. ಆದರೆ ಶ್ರೀಮಾತೆ ಅವರನ್ನು 'ನೀವು ಯಾರು?' ಎಂದು ಎಂದೂ ಕೇಳಲಿಲ್ಲ. ಪುರಾಣಗಳಲ್ಲಿ ಜಗನ್ಮಾತೆಗೆ ಅಷ್ಟ ಸಖಿಯರಿದ್ದಾರೆ ಎಂಬ ಮಾತಿದೆ. ಅಂದರೆ ಶ್ರೀಮಾತೆಯವರನ್ನು ಜಗನ್ಮಾತೆ ಅಥವಾ ಸಗುಣ ಸಾಕಾರ ಬ್ರಹ್ಮ ಎಂದು ತಿಳಿಯಬೇಕು.

ಮತ್ತೊಂದು ಘಟನೆ. ಶ್ರೀಮಾತೆ ಜಯರಾಂಬಾಟಿಯಿಂದ ದಕ್ಷಿಣೇಶ್ವರಕ್ಕೆ ತಮ್ಮ ತಂದೆಯವರೊಡನೆ ನಡೆದು ಬರುತ್ತಿದ್ದರು. ಸುಮಾರು ನೂರು ಕಿಲೋಮೀಟರ್ ದೂರದ ರಸ್ತೆ. ಬಹಳ ದೂರ ನಡೆದು ಅಭ್ಯಾಸವಿಲ್ಲದ ಶ್ರೀಮಾತೆಗೆ ಪ್ರಯಾಣ ಬಹಳ ಕಷ್ಟಕರ ವಾಯಿತು. ಮಾರ್ಗ ಮಧ್ಯದಲ್ಲಿ ಆಯಾಸದಿಂದ ಜ್ವರ ಬಂದಿತು. ಮುಂದೆ ನಡೆಯುವುದು ಅಸಾಧ್ಯವಾಯಿತು. ಒಂದು ಗುಡಿಸಿಲಿನಲ್ಲಿ ಆಶ್ರಯ ಪಡೆಯಬೇಕಾಯಿತು. ರಾತ್ರಿ ಜ್ವರ ಹೆಚ್ಚಾಗಿ ಶ್ರೀಮಾತೆಗೆ ಬಾಹ್ಯಪ್ರಜ್ಞೆ ಇಲ್ಲದಂತಾಯಿತು. ಅವರು ಅರ್ಧಪ್ರಜ್ಞಾವಸ್ಥೆಯಲ್ಲಿ ಮಲಗಿದ್ದಾಗ ಅವರಿಗೆ ಒಂದು ದರ್ಶನವಾಯಿತು. ಈ ಸ್ವಪ್ನ ದರ್ಶನದ ಕುರಿತು ಶ್ರೀಮಾತೆಯವರು ಮುಂದೆ ತಮ್ಮ ಭಕ್ತರೊಡನೆ ಹೀಗೆ ಹೇಳುತ್ತಿದ್ದರು: ''ಅಂದು ನನಗೆ ಜ್ವರದಿಂದ ಪ್ರಜ್ಞೆಯೇ ಇರಲಿಲ್ಲ. ಅಸ್ತವ್ಯಸ್ತವಾಗಿ ಮಲಗಿಕೊಂಡಿದ್ದೆ. ಆಗ ಒಬ್ಬಳು ಹೆಂಗಸು — ಕಾಡಿಗೆ ಬಣ್ಣದ ಹೆಂಗಸು — ಬಂದು ನನ್ನ ಬಳಿ ಕುಳಿತಳು. ಅವಳು ಅಷ್ಟೊಂದು ಕಪ್ಪಾಗಿದ್ದರೂ ಅವಳಂಥ ಸುಂದರಿಯನ್ನು ನಾನು ಕಂಡಿರಲಿಲ್ಲ. ಅವಳು ತನ್ನ ತಣ್ಣನೆಯ ಮೃದುವಾದ ಕೈಗಳಿಂದ ನನ್ನ ಹಣೆಯನ್ನು ನೇವರಿಸುತ್ತಿದ್ದ ಹಾಗೆಯೇ ನನ್ನ ಜ್ವರದ ತಾಪ ಇಳಿಯಿತು. ನಾನು ಅವಳನ್ನು ಕೇಳಿದೆ: 'ಎಲ್ಲಿಂದ ಬರುತ್ತಿದ್ದೀ?' ಅದಕ್ಕೆ ಅವಳು ಹೇಳಿದಳು, 'ದಕ್ಷಿಣೇಶ್ವರದಿಂದ.' ಅದನ್ನು ಕೇಳಿ ನಾನು ಆಶ್ಚರ್ಯದಿಂದ ಅವಾಕ್ಕಾದೆ. ಏಕೆಂದರೆ ನಾನೂ ಅಲ್ಲಿಗೇ ಹೊರಟಿರುವುದು. ನಾನು ಹೇಳಿದೆ: 'ಏನು? ದಕ್ಷಿಣೇಶ್ವರದಿಂದಲೆ? ನಾನೂ ಅಲ್ಲಿಗೇ ಹೋಗುತ್ತಿದ್ದೇನೆ, ನನ್ನ ಪತಿಯ ಬಳಿಗೆ. ಅವರು ಅಲ್ಲಿದ್ದಾರೆ. ಆದರೆ ನನ್ನ ದುರದೃಷ್ಟ. ಈ ಜ್ವರ ನನ್ನನ್ನು ನಡುದಾರಿಯಲ್ಲಿ ತಡೆದು ನಿಲ್ಲಿಸಿಬಿಟ್ಟಿತು.' ನಾನು ಹೀಗೆ ಹೇಳಿದಾಗ ಅವಳು ನನಗೆ ಸಮಾಧಾನ ಮಾಡಿದಳು: 'ಏನೂ ಚಿಂತಿಸಬೇಡ. ನೀನು ಬೇಗ ಗುಣಹೊಂದುತ್ತೀಯೆ. ಪತಿದರ್ಶನವನ್ನೂ ಮಾಡುತ್ತೀಯೆ.' 'ನಿಜಕ್ಕೂ ಹಾಗೇನು? ಹಾಗಾದರೆ ನೀನು ಯಾರು?' ಅದಕ್ಕೆ ಅವಳು ಹೇಳಿದಳು: 'ನಾನು ನಿನ್ನ ಸೋದರಿ.' ಇದನ್ನು ಕೇಳಿ ಬಹಳ ಆಶ್ಚರ್ಯವಾಯಿತು. ಈ ಸಂಭಾಷಣೆಯ ನಂತರ ನನಗೆ ಜೊಂಪು ಹತ್ತಿತು.''

ಶ್ರೀಮಾತೆ ಸಾಕಾರ ಬ್ರಹ್ಮವಾದರೆ ಅವಳ ಸೋದರಿ ದಕ್ಷಿಣೇಶ್ವರದ ಕಾಳಿ. ಅದೇ ಬ್ರಹ್ಮದ ಮತ್ತೊಂದು ರೂಪ.

ಶ್ರೀರಾಮಕೃಷ್ಣರು ಶ್ರೀಮಾತೆಯನ್ನು ಜಗನ್ಮಾತೆಯ ರೂಪದಿಂದಲ್ಲದೆ ಮತ್ತಾವ ದೃಷ್ಟಿಯಿಂದ ಕೂಡ ಎಂದೂ ನೋಡಲಿಲ್ಲ. ಒಮ್ಮೆ ಅವರ ಮನಸ್ಸಿನಲ್ಲಿ ದೈವೇಚ್ಛೆಯಿಂದ ತಮ್ಮ ಒಂದು ಅದ್ಭುತ ಆಸೆ ಉದಯವಾಯಿತು. ಅವರು ಸ್ವಲ್ಪವೂ ಅಳುಕದೆ ಅದನ್ನು ಕಾರ್ಯರೂಪಕ್ಕೆ ತರಲು ಉದ್ಯುಕ್ತರಾದರು. ಅದೇ 'ಷೋಡಶೀಪೂಜೆ.' ಶ್ರೀರಾಮಕೃಷ್ಣರ ಜೀವನದ ಈ ಅಧ್ಯಾಯ ಎಲ್ಲರನ್ನೂ ಅಚ್ಚರಿಗೊಳಿಸುವಂಥದ್ದು. ಯಾವ ಶಾಸ್ತ್ರದಲ್ಲೂ ಕಾಣದೆ ಇರುವಂಥದ್ದು. ಶ್ರೀರಾಮಕೃಷ್ಣರ ಅನುಭವಗಳು ವೇದ-ವೇದಾಂತವನ್ನು ಮೀರಿದುದು ಎಂದು ಹೇಳುತ್ತಾರೆ, ಸ್ವಾಮಿ ವಿವೇಕಾನಂದರು. ಶ್ರೀರಾಮಕೃಷ್ಣರ ಜೀವನದ ಈ ಘಟನೆಯೂ ವಿವೇಕಾನಂದರ ಮಾತಿಗೆ ಸಾಕ್ಷಿ ಎನ್ನಬಹುದು. ಪತಿಯು ಪತ್ನಿಯನ್ನು ಪೂಜಿಸುವುದು! ಶ್ರೀರಾಮಕೃಷ್ಣರು ಫಲಹಾರಿಣಿ ಕಾಳೀಪೂಜೆಯ ದಿನ ಶ್ರೀಮಾತೆಯವರಿಗೆ 'ಷೋಡಶೀ ಪೂಜೆ' ಮಾಡಿದರು.

ಹೊರಗಿನ ನೋಟಕ್ಕೆ ಇದು ಪತಿಯು ಪತ್ನಿಯನ್ನು ಪೂಜಿಸಿದರು ಎಂಬಂತೆ ತೋರುತ್ತದೆ. ಆದರೆ ಇಲ್ಲಿ ಪತಿ ಯಾರು, ಪತ್ನಿ ಯಾರಾಗಿದ್ದರು ಎನ್ನುವುದನ್ನು ಸ್ವಲ್ಪ ವಿಶ್ಲೇಷಿಸಿ ನೋಡಿದರೆ ಆಗ ಈ ಪೂಜೆಯ ಮಹತ್ವ ಅರ್ಥವಾಗುತ್ತದೆ.

ಮೊದಲನೆಯದಾಗಿ ಶ್ರೀಮಾತೆಯನ್ನು ಬರಿಯ ಪತ್ನಿಯಾಗಿ ಅವರು ಷೋಡಶಿ ಸ್ಥಾನದಲ್ಲಿ ಕುಳ್ಳಿರಿಸಿ ಪೂಜಿಸಲಿಲ್ಲ. ಶ್ರೀ ಮಾತೆಯವರ ದೈವತ್ವದ ಅರಿವು ಅವರಿಗೆ ಸಂಪೂರ್ಣವಾಗಿತ್ತು. ಆದುದರಿಂದ ಶ್ರೀಮಾತೆಯವರ ರೂಪದಲ್ಲಿದ್ದ ಷೋಡಶಿಯನ್ನೇ ಅವರು ಪೂಜಿಸಿದರು.

ಒಂದು ದಿನ ಹೇಗೋ ಮಾತಿನ ಸಂದರ್ಭದಲ್ಲಿ ಅವರು ಗೋಲಾಪ್ ಮಾ ಹತ್ತಿರ ಹೇಳುತ್ತಾರೆ, ''ನೋಡು, ಈ ಶಾರದೆ ಸಾಕ್ಷಾತ್ ಸರಸ್ವತಿ. ಅವಳು ಜಗತ್ತಿಗೆ ಜ್ಞಾನ ಕೊಡುವುದಕ್ಕೋಸ್ಕರ ಬಂದಿದ್ದಾಳೆ. ಆದರೆ ಅವಿವೇಕಿಗಳಾದ ಜನ ಅವಳನ್ನು ಅಪವಿತ್ರ ದೃಷ್ಟಿಯಿಂದ ನೋಡಿ ಅಧೋಗತಿಗೆ ಗುರಿಯಾಗದಿರಲೆಂದು ಈ ಸಲ ಅವಳು ತನ್ನ ದಿವ್ಯ ಸೌಂದರ್ಯವನ್ನು ಮರೆಮಾಚಿಕೊಂಡು ಬಂದಿದ್ದಾಳೆ.''

ಮತ್ತೊಂದು ಸಂದರ್ಭದಲ್ಲಿ ಶ್ರೀರಾಮಕೃಷ್ಣರು, ''ಅವಳು ಸಾರದಾಯಿನಿ, ಜ್ಞಾನ ಕೊಡುವವಳು. ಅವಳೇನು ಸಾಮಾನ್ಯ ಹೆಂಗಸು

ಅಂತ ತಿಳಿದುಕೊಂಡೆಯಾ? ಅವಳು ನನ್ನ ಶಕ್ತಿ'' ಎಂದು ಹೇಳುತ್ತಾರೆ.

ಮತ್ತೊಂದು ದಿನ ಶ್ರೀರಾಮಕೃಷ್ಣರ ಜೊತೆಯಲ್ಲೇ ಇದ್ದ ಲಾಟು (ಮುಂದೆ ಸ್ವಾಮಿ ಅದ್ಭುತಾನಂದರು) ಪಂಚವಟಿಯಲ್ಲಿ ತೀವ್ರ ಧ್ಯಾನದಲ್ಲಿ ತೊಡಗಿದ್ದ. ಅತ್ತ ಬಂದ ಶ್ರೀರಾಮಕೃಷ್ಣರು ಅವನನ್ನು ಧ್ಯಾನದಿಂದ ಹೊರಜಗತ್ತಿಗೆ ತಂದರು. ಅವನಿಗೆ ಹೇಳುತ್ತಾರೆ: ''ಏ ಲಾಟು, ನೀನು ಇಲ್ಲಿ ಕುಳಿತಿದ್ದೀಯಾ? ನೋಡು, ನೀನು ಇಲ್ಲಿ ಕುಳಿತು ಯಾರ ಮೇಲೆ ಧ್ಯಾನ ಮಾಡುತ್ತಿದ್ದೀಯೋ ಅವಳು ಅಲ್ಲಿ ಚಪಾತಿ ಲಟ್ಟಿಸುತ್ತಿದ್ದಾಳೆ. ಹೋಗು, ಹೋಗು ಅವಳಿಗೆ ಸ್ವಲ್ಪ ಸಹಾಯ ಮಾಡು.'' ಅಂದರೆ ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಧ್ಯಾನಯೋಗ್ಯರಾದ ದೇವತೆ ಎಂದು ಸೂಚಿಸುತ್ತಿದ್ದಾರೆ. ಮತ್ತೊಮ್ಮೆ ಹೃದಯನು ಶ್ರೀಮಾತೆಯ ಬಗ್ಗೆ ಲಘುವಾಗಿ ಮಾತನಾಡಿದಾಗ ಅವನನ್ನು ಎಚ್ಚರಿಸುತ್ತಾರೆ; ''ನೋಡು ಹೃದು, ನೀನು ನನ್ನನ್ನು ಬೇಕಾದರೂ ತಾತ್ಸಾರ ಮಾಡಬಹುದು. ಆದರೆ ಅವಳನ್ನು ಯಾವ ರೀತಿಯಲ್ಲೂ ನೋಯಿಸಬೇಡ. ಇದರಲ್ಲಿ (ಅಂದರೆ ತಮ್ಮ ದೇಹದಲ್ಲಿ) ಯಾರಿದ್ದಾರೋ ಅದು ಬುಸುಗುಟ್ಟಿದರೆ ತಪ್ಪಿಸಿಕೊಳ್ಳಬಹುದು. ಆದರೆ ಅವಳ ಅಂತರ್ಯದಲ್ಲಿರುವವರು ಬುಸುಗುಟ್ಟಿದರೆ ಹರಿ, ಹರ, ಬ್ರಹ್ಮಾದಿಗಳೂ ನಿನ್ನನ್ನು ಕಾಪಾಡಲಾರರು.''

ಇದೆಲ್ಲದರ ಹಿನ್ನೆಲೆಯನ್ನು ನೋಡಿದರೆ ಭಗವಾನ್ ಶ್ರೀರಾಮಕೃಷ್ಣರು ಷೋಡಶೀಪೂಜೆಯಲ್ಲಿ ಶ್ರೀಮಾತೆಯವರನ್ನು ಪೂಜಿಸಿ ಅವರನ್ನು ದೈವತ್ವಕ್ಕೇರಿಸಿದರು ಎನ್ನುವುದರ ಬದಲು, ಶ್ರೀಮಾತೆಯವರ ರೂಪದಲ್ಲಿದ್ದ ಷೋಡಶಿಯನ್ನು ಪೂಜಿಸಿದರು ಎನ್ನುವುದು ಉಚಿತವಾಗುತ್ತದೆ.

೧೮೭೨ರ ಜೂನ್ ೫ನೆಯ ದಿನ. ಅಂದು ಫಲಹಾರಿಣಿ ಕಾಳೀ ಪೂಜೆಯ ಶುಭದಿನ. ತಾಯಿ ಕಾಳಿ ಜೀವಿಗಳ ಪೂರ್ವಾರ್ಜಿತ ಕರ್ಮಫಲಗಳನ್ನು ನಿರ್ಮೂಲ ಮಾಡಬಲ್ಲವಳಾದ್ದರಿಂದ ಅವಳಿಗೆ 'ಫಲಹಾರಿಣಿ' ಎಂಬ ಬಿರುದು. ಶ್ರೀರಾಮಕೃಷ್ಣರು ಫಲಹಾರಿಣಿ ಕಾಳೀಪೂಜೆಯ ಆ ಶುಭದಿನದಂದು ಷೋಡಶೀ ಪೂಜೆಗೈಯುವ ನಿರ್ಧಾರ ಮಾಡಿದ್ದಾರೆ. ಷೋಡಶೀ ಪೂಜೆಯೆಂದರೇನು? ಇದನ್ನು ತಾಂತ್ರಿಕ ದೃಷ್ಟಿಯಿಂದ ಸ್ವಲ್ಪ ಅವಲೋಕಿಸೋಣ. ಶಾಸ್ತ್ರದಲ್ಲಿ ಇದು ಎರಡು ರೀತಿಯದು. ಉತ್ತರ ಭಾರತದಲ್ಲಿ ಅದರಲ್ಲೂ ಪಶ್ಚಿಮ ಬಂಗಾಳದಲ್ಲಿ ಇದರ ಆಚರಣೆಗೆ 'ಕಾಳೀಕುಲ' ಎನ್ನುತ್ತಾರೆ. ಅದನ್ನೇ ದಕ್ಷಿಣ ಭಾರತದಲ್ಲಿ 'ಶ್ರೀಕುಲ' ಎನ್ನುತ್ತಾರೆ. ಉತ್ತರಭಾರತದಲ್ಲಿ ಕಾಳೀಕುಲದ ದೇವತೆ 'ಕಾಳೀ'. ದಕ್ಷಿಣ ಭಾರತದಲ್ಲಿ ಶ್ರೀಕುಲದ ದೇವತೆ 'ಶ್ರೀವಿದ್ಯೆ'. ಶ್ರೀವಿದ್ಯೆಯನ್ನು ತ್ರಿಪುರಸುಂದರಿ, ಲಲಿತೆ, ರಾಜರಾಜೇಶ್ವರಿ, ಷೋಡಶಿ ಮುಂತಾದ ಹೆಸರಿನಿಂದಲೂ ಪೂಜಿಸುತ್ತಾರೆ. ಇವೆಲ್ಲಾ ಒಂದೇ ಶಕ್ತಿಯ ಹಲವು ರೂಪಗಳು. ಶ್ರೀರಾಮಕೃಷ್ಣರು 'ಕಾಳೀಕುಲ'ದ ಪದ್ಧತಿಯಲ್ಲಿ ಭೈರವಿ ಬ್ರಾಹ್ಮಣಿಯ ಶಿಷ್ಯರಾಗಿ ಸಾಧನೆ ಮಾಡಿ, ನಂತರ 'ಶ್ರೀಕುಲ' ಪದ್ಧತಿಯಲ್ಲಿ ಷೋಡಶಿಯ ಪೂಜೆ ಮಾಡಿದರು. ಈ ಷೋಡಶಿಯನ್ನು ಯಂತ್ರದಲ್ಲಾಗಲೀ, ವಿಗ್ರಹದಲ್ಲಾಗಲೀ ಪೂಜಿಸಲಿಲ್ಲ. ಆದರೆ ಶ್ರೀಮಾತೆಯಲ್ಲಿ ಷೋಡಶಿಯನ್ನು ಆವಾಹಿಸಿ ಪೂಜಿಸಿದರು. ಅವರ ಪಾಲಿಗೆ ಶ್ರೀಮಾತೆ ಬರಿಯ ಷೋಡಶಿಯಾಗಿರಲಿಲ್ಲ. ಅವಳು ವಿದ್ಯೆಯನ್ನು ದಯಪಾಲಿಸಲು ಬಂದಿರುವ ಸರಸ್ವತಿ, ಸಂಪತ್ತನ್ನು ದಯಪಾಲಿಸುವ ಲಕ್ಷ್ಮೀ ಹಾಗೂ ವಿಷ್ಣುವಾದ ತಮ್ಮ ಶಕ್ತಿ ಎಂದೂ ಕರೆದರು, ಭಾವಿಸಿದರು. ಹಾಗೆ ಆವಾಹನೆ ಮಾಡಿ, ಅವಳಲ್ಲಿ ಆ ಮೂವರನ್ನೂ ಶ್ರೀಮಾತೆಯ ರೂಪದಲ್ಲಿ ಪೂಜಿಸಿದರು. ಶ್ರೀರಾಮಕೃಷ್ಣರು ಶಿವಸ್ವರೂಪರಾದರೆ ಶ್ರೀಮಾತೆ ಶಕ್ತಿಸ್ವರೂಪಿಣಿ. ಸ್ವಾಮಿ ವಿವೇಕಾನಂದರು ಶ್ರೀಮಾತೆಯವರನ್ನು ಜೀವಂತ ದುರ್ಗೆ ಎಂದೇ ಭಾವಿಸಿ ಪೂಜಿಸಿದರು. ತಮಗೆ ಶ್ರೀರಾಮಕೃಷ್ಣರ ಕೃಪೆಗಿಂತ ತಾಯಿಯ ಕೃಪೆ ಸಾವಿರ ಪಟ್ಟು ಹೆಚ್ಚು ಎಂದರು. ಅಲ್ಲದೆ ಶ್ರೀಮಾತೆ ಕೂಡ ತಾನು ಕಾಳಿಯ ಸ್ವರೂಪ ಎಂದು ಹಲವು ಬಾರಿ ಹೇಳಿದ್ದಾರೆ. ಆದುದರಿಂದಲೇ ಶ್ರೀರಾಮಕೃಷ್ಣರು ಷೋಡಶಿಯ ರೂಪದಲ್ಲಿ ಅವರನ್ನು ಪೂಜಿಸಲು ಕಾಳೀಪೂಜೆಯ ರಾತ್ರಿಯನ್ನು ಆರಿಸಿಕೊಂಡಿದ್ದರು. ಆದ್ಯಾಶಕ್ತಿ ಷೋಡಶಿಯ ಇತರ ರೂಪಗಳು ದುರ್ಗಾ, ಸರಸ್ವತಿ, ಜಗದ್ಧಾತ್ರೀ, ಬಗಲಾ, ಲಕ್ಷ್ಮೀ ಇತ್ಯಾದಿ. ಅಂದರೆ ಶ್ರೀಮಾತೆಯು ಎಲ್ಲಾ ಶಕ್ತಿಗಳ ಒಟ್ಟು ಮೊತ್ತ. ಇದರ ಅರಿವಿಲ್ಲದೆಯೇ ನಾವೆಲ್ಲಾ ಅವಳನ್ನು ಕರುಣಾಮಯಿ, ಕೃಪಾಮಯಿ, ವರದಾಯಿನಿ, ಅಭಯಂಕರಿ, ನಮ್ಮ ತಾಯಿ ಎಂದು ಸರಳಭಾವದಿಂದ ಸಂಬೋಧಿಸಿ, ಪೂಜಿಸಿ ಆನಂದಿಸುತ್ತೇವೆ. ಸರಳತೆಯ ಮೂರ್ತಿಯಾಗಿದ್ದ ಶ್ರೀಮಾತೆ ಕೂಡ ತಮ್ಮೆಲ್ಲ ಭಕ್ತರು 'ಅಮ್ಮ' ಎಂದು ಸಂಬೋಧಿಸಿ ಕರೆಯುವುದನ್ನೇ ಇಷ್ಟಪಡುತ್ತಿದ್ದರು.

ಅಂದು ಶ್ರೀರಾಮಕೃಷ್ಣರು ಶ್ರೀಮಾತೆಯನ್ನು ಹೇಗೆ ಪೂಜಿಸಿದರು?

ಶ್ರೀಮಾತೆ ಆಸನದ ಮೇಲೆ ಕುಳಿತುದೇ ಪೂಜಾರಿಯ ಸ್ಥಾನದಲ್ಲಿ ಕುಳಿತಿದ್ದ ಶ್ರೀರಾಮಕೃಷ್ಣರು ಪೂಜೆ ಆರಂಭಿಸಿದರು. ಆಚಮನಾದಿ ಪ್ರಾರಂಭದ ಶುದ್ಧಿಕಾರ್ಯಗಳನ್ನು ಮೊದಲು ಮಾಡಿದರು. ಶ್ರೀಮಾತೆಯ ಮನಸ್ಸು ಈಗಾಗಲೇ ಭಗವದ್ಭಾವದಿಂದ ರಂಜಿತವಾಗಿತ್ತು. ಶ್ರೀರಾಮಕೃಷ್ಣರು ಅವರ ಮೇಲೆ ಪವಿತ್ರ ಗಂಗಾಜಲವನ್ನು ಪ್ರೋಕ್ಷಿಸುತ್ತಾ ಜಗನ್ಮಾತೆಯನ್ನು ಆವಾಹನೆ ಮಾಡಿದರು: ''ಹೇ ಜಗನ್ಮಾತೆ, ಕೌಮಾರೀ, ಸರ್ವಶಕ್ತಿಪ್ರದಾಯಿನೀ, ಸೌಂದರ್ಯರತ್ನಾಕರೀ, ಈಕೆಯ ದೇಹಮನಗಳನ್ನು ಪವಿತ್ರಗೊಳಿಸಿ ನೀನು ಇವಳಲ್ಲಿ ಆವಿರ್ಭವಿಸು; ಸಿದ್ಧಿದ್ವಾರವನ್ನು ತೆರೆ; ಶುಭವನ್ನುಂಟುಮಾಡು; ಮಂಗಳವನ್ನುಂಟುಮಾಡು'' ಎಂದು. ಹೀಗೆ ಪ್ರಾರ್ಥಿಸಿಕೊಂಡ ನಂತರ ಅವರು ಮಂತ್ರಪೂರ್ವಕ ನ್ಯಾಸದ ಮೂಲಕ ಶಾರದಾದೇವಿಯವರಲ್ಲಿ ಆರಾಧ್ಯ ದೇವತೆಯಾದ ಜಗನ್ಮಾತೆಯನ್ನು ತಾದಾತ್ಮ್ಯಗೊಳಿಸಿದರು. ಷೋಡಶೋಪಚಾರ ಪೂಜೆ ಮಾಡಿದರು. ಶ್ರೀಮಾತೆಯ ಹಿಮ್ಮಡಿಯ ಬದಿಗೆ ಕೆಂಪುಬಣ್ಣವನ್ನು ಲೇಪಿಸಿದರು. ಹಣೆಗೆ ಅರಿಶಿನ ಕುಂಕುಮವನ್ನಿಟ್ಟರು. ಹೊಸ ಸೀರೆಯನ್ನುಡಿಸಿದರು. ಬಾಯಿಗೆ ಸಿಹಿ ಹಾಕಿ ತಿನ್ನಿಸಿದರು. ಬಳಿಕ ತಾಂಬೂಲವನ್ನು ಕೊಟ್ಟರು.

ಶ್ರೀರಾಮಕೃಷ್ಣರು ಶ್ರೀಮಾತೆಯವರನ್ನು ಷೋಡಶಿಯ ರೂಪ

ದಲ್ಲಿ, ತ್ರಿಕೂಟ ಮಂತ್ರದಿಂದ ಆವಾಹಿಸಿ ಪೂಜಿಸಿದರು. ತ್ರಿಕೂಟ ಎಂಬ ಶಬ್ದವೇ ತಿಳಿಸುವಂತೆ ಅದರಲ್ಲಿ ಮೂರು ಗುಂಪಿದೆ. ಅದರ ಒಂದು ಭಾಗದ ಹೆಸರು 'ವಾಗ್ಭವ ಕೂಟ' ಇದರ ಮಂತ್ರದ ದೇವತೆ ಸರಸ್ವತಿ. ಮತ್ತೊಂದು ಭಾಗ 'ಕಾಮರಾಜ ಕೂಟ'. ಇದು ಆಸೆ ಅಥವಾ ಮನಃಶಕ್ತಿಯ ಕುರುಹು. ಇದು ಪ್ರತಿನಿಧಿಸುವ ಮಂತ್ರದ ದೇವತೆ ಕಾಳಿ. ಮತ್ತೊಂದು ಭಾಗ 'ಶಕ್ತಿಕೂಟ'. ಇದು ಪ್ರತಿನಿಧಿಸುವ ಮಂತ್ರದ ದೇವತೆ ದುರ್ಗೆ. ಷೋಡಶೀ ಈ ಮೂರೂ ಕೂಟಗಳ ಅಂದರೆ ಸರಸ್ವತಿ, ದುರ್ಗೆ, ಕಾಳಿ ಹಾಗೂ ಎಲ್ಲ ದೇವತೆಗಳ ಮೂಲ. ಅಂದರೆ ಶ್ರೀರಾಮಕೃಷ್ಣರು ಷೋಡಶೀರೂಪದಲ್ಲಿ ಶ್ರೀಮಾತೆಯವರನ್ನು ಪೂಜಿಸಿದರೆಂದರೆ, ಈ ಮೂರೂ ದೇವತೆಗಳನ್ನು ಶ್ರೀಮಾತೆಯವರಲ್ಲಿ ಆಹ್ವಾನಿಸಿ ಚೈತನ್ಯ ತುಂಬಿದರು.

ಅಂದಿನಿಂದ ಶ್ರೀಮಾತೆಯವರ ಶಕ್ತಿ ಅದ್ಭುತ, ಅಪಾರ. ಸುಪ್ತ ಚೈತನ್ಯ ಜಾಗೃತವಾಯಿತು. ಅದನ್ನರಿತಿದ್ದ ಸ್ವಾಮೀಜಿ ಅಮೆರಿಕಾದಿಂದ ತಮ್ಮ ಸೋದರ ಶಿಷ್ಯರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: ''ಶ್ರೀಮಾತೆಯವರ ಜೀವನದ ಮಹತ್ವವನ್ನು ನಿಮ್ಮಲ್ಲಿ ಇನ್ನೂ ಯಾರೂ ಅರಿತಿಲ್ಲ... ಆದ್ಯಾಶಕ್ತಿಯ ಅನುಗ್ರಹವಿಲ್ಲದೆ ಜಗತ್ತಿಗೆ ಉದ್ಧಾರವಿಲ್ಲ... ಶ್ರೀಮಾತೆಯವರ ಕೃಪೆ ನನ್ನ ಪಾಲಿಗೆ ಶ್ರೀರಾಮಕೃಷ್ಣರ ಕೃಪೆಗಿಂತ ನೂರು ಪಟ್ಟು, ಸಾವಿರ ಪಟ್ಟು ಅಮೂಲ್ಯ. ಶ್ರೀಮಾತೆಯವರ ಕೃಪೆ, ಶ್ರೀಮಾತೆಯವರ ಆಶೀರ್ವಾದ ಎಲ್ಲವೂ ನನಗೆ ಪರಮೋತ್ಕೃಷ್ಟ. ಸೋದರ, ನೋಡು, ನನ್ನ ಹೆಸರು ನಿಜಕ್ಕೂ ವಿವೇಕಾನಂದನೇ ಹೌದಾದಲ್ಲಿ ನಿಮಗೆಲ್ಲಾ ನಾನು ಜೀವಂತ ದುರ್ಗೆಯನ್ನು ಆರಾಧಿಸಿ ತೋರಿಸಿಕೊಡುತ್ತೇನೆ.''

ಶ್ರೀಮಾತೆಯವರಲ್ಲಿ ಸುಪ್ತವಾಗಿದ್ದ ಆ ಪರಮ ದೈವತ್ವವನ್ನು ದುರ್ಗೆ, ಕಾಳಿ, ಸರಸ್ವತಿಯ ಶಕ್ತಿಯನ್ನು ಶ್ರೀರಾಮಕೃಷ್ಣರು ಷೋಡಶೀ ಪೂಜೆಯಿಂದ ಜಾಗೃತಗೊಳಿಸಿದರು. ಶ್ರೀಮಾತೆ ಕೂಡ ಪೂಜೆಯ ನಂತರ ಯಾವ ಆಶ್ಚರ್ಯವನ್ನೂ ವ್ಯಕ್ತಪಡಿಸಲಿಲ್ಲ. ಕಾರಣ, ಶ್ರೀಮಾತೆ ಅಂದು ಹೊಸದಾಗಿ ಯಾವ ಶಕ್ತಿಯನ್ನೂ ಪಡೆಯಲಿಲ್ಲ. ತಮ್ಮಲ್ಲಿ ಸುಪ್ತವಾಗಿದ್ದ ಆ ದೈವತ್ವದ ಪೂಜೆಯಷ್ಟೇ ನಡೆಯಿತು. ಅಲ್ಲದೆ ಆ ಜಾಗೃತ ಶಕ್ತಿಯನ್ನೂ ಸುಪ್ತವಾಗಿಯೇ, ಅಂದರೆ ಹೊರ ಜಗತ್ತಿನ ಸಾಮಾನ್ಯ ನೋಟಕ್ಕೆ ತೋರದಂತೆ ತಮ್ಮ ಆಂತರ್ಯದಲ್ಲೇ ಅಡಗಿಸಿಟ್ಟುಕೊಂಡರು. ಪೂಜೆ ಮಾಡುವಾಗ ಆದ ಆ ಉದ್ದೀಪನೆಯೂ ಸಹಜ ರೀತಿಯಲ್ಲಿ, ಸರಳವಾಗಿ, ಆಗಿರಲಿಲ್ಲ. ಮುಂದೆ ಕೆಲವು ಭಕ್ತೆಯರು ಕುತೂಹಲ ತಾಳಲಾರದೆ ಶ್ರೀಮಾತೆಯನ್ನು, ''ಅಮ್ಮ, ನೀವು ಶ್ರೀರಾಮಕೃಷ್ಣರಿಂದ ಹೇಗೆ ಪೂಜೆ ಮಾಡಿಸಿಕೊಂಡಿರಿ? ಗಂಡನಿಂದ ಹೇಗೆ ಪೂಜೆಮಾಡಿಸಿಕೊಂಡಿರಿ? ಸ್ವಭಾವತಃ ನೀವು ತುಂಬಾ ಲಜ್ಜೆಯ ಸ್ವಭಾವದವರು'' ಎಂದು ಪ್ರಶ್ನಿಸಿದರು. ಅದಕ್ಕೆ ಶ್ರೀಮಾತೆಯವರು ಕೊಟ್ಟ ಉತ್ತರ ಅದ್ಭುತ, ಕಣ್ಣು ತೆರೆಸುವಂಥದ್ದು. ಶ್ರೀಮಾತೆ ಹೇಳಿದರು, ''ಆಗ ನಾನು ನಾನಾಗಿರಲಿಲ್ಲ.'' ಈ ವಾಕ್ಯದ ಮೇಲೆ ಭಾಷ್ಯ ಬರೆಯಬಹುದು. 'ನಾನು ನಾನಾಗಿರಲಿಲ್ಲ' ಎಂದರೆ ಏನು ಅರ್ಥ? ಅವರು ತಮ್ಮ ನಿಜ ಸ್ವರೂಪವಾದ ಷೋಡಶಿಯೇ ಆಗಿದ್ದರು. ಅಥವಾ ಸೃಷ್ಟಿ, ಸ್ಥಿತಿ, ಪ್ರಳಯವನ್ನುಂಟು ಮಾಡುವ ಶಕ್ತಿಸ್ವರೂಪಿಣಿಯಾಗಿದ್ದರು. ಅವರೇ ಮತ್ತೊಂದೆಡೆ ಹೇಳಿದ್ದಾರೆ. ''ನನಗೆ ನನ್ನ ನಿಜಸ್ವರೂಪ ಯಾವಾಗಲೂ ನೆನಪಿನಲ್ಲಿರುವುದಿಲ್ಲ. ಆದರೆ ಮನ ಬಂದಾಗ ನೆನಪಿಸಿಕೊಂಡಲ್ಲಿ ನನ್ನ ನಿಜ ಸ್ವರೂಪದ ಅರಿವಾಗುತ್ತದೆ.'' ಅವರ ನಿಜಸ್ವರೂಪವೇನು? ಶ್ರೀಮಾತೆಯವರನ್ನು ಅವರ ಕೃಪೆಯಿಂದ ಸಾಕ್ಷಾತ್ಕಾರ ಮಾಡಿ ಕೊಂಡವರಿಗಷ್ಟೇ ಅದು ಗೊತ್ತು.

ಇನ್ನೊಂದು ವಿಷಯ. ಶ್ರೀರಾಮಕೃಷ್ಣರು ಪೂಜೆಯ ಕೊನೆಯಲ್ಲಿ, ಜಗನ್ಮಾತೆಗೆ ಅನನ್ಯ ಶರಣಾಗತಿ ಭಾವದಿಂದ ತಮ್ಮ ಸಕಲ ಸಾಧನೆಗಳ ಫಲ, ಜಪಮಾಲೆ ಇವುಗಳೊಂದಿಗೆ ತಮ್ಮ ಸರ್ವಸ್ವವನ್ನೂ, ಸಮರ್ಪಣೆ ಮಾಡಿಕೊಂಡರು. ಬಳಿಕ 'ಸರ್ವಮಂಗಳ ಮಾಂಗಲ್ಯೇ' ಸ್ತೋತ್ರವನ್ನು ಹೇಳಿ ಪ್ರಾರ್ಥಿಸಿಕೊಂಡರು. ಜಗನ್ಮಾತೆಯು ಶುಂಭ ರಾಕ್ಷಸನ ವಧೆಯನ್ನು ಮಾಡಿದ ನಂತರ ಋಷಿಗಳು ಜಗನ್ಮಾತೆಗೆ ಕೃತಜ್ಞತೆ ತೋರಿಸಲು 'ನಾರಾಯಣೀ ಸ್ತುತಿ'ಯ ರೂಪದಲ್ಲಿ ಇದೇ ಶ್ಲೋಕದಿಂದ ಸ್ತುತಿಸುತ್ತಾ ಅವಳಿಗೆ ಶರಣಾಗತರಾಗುವುದನ್ನು ನಾವು 'ಶ್ರೀ ದುರ್ಗಾಸಪ್ತಶತೀ' ಗ್ರಂಥದಲ್ಲಿ ಕಾಣುತ್ತೇವೆ.

ಇಲ್ಲಿ ಕೂಡ ಶ್ರೀರಾಮಕೃಷ್ಣರು ಜಗನ್ಮಾತೆಯ ಬಳಿ ಸಂಪೂರ್ಣ ಶರಣಾಗತಿ ಹೊಂದುವುದನ್ನು ಕಾಣುತ್ತೇವೆ. ಪೂಜೆಯ ಸಮಯದಲ್ಲಿ ಶ್ರೀಮಾತೆಯವರು ಭಾವಾವಸ್ಥೆಯಲ್ಲಿದ್ದರು. ಪೂರ್ಣಾಹುತಿಯ ಹೊತ್ತಿಗೆ ಗಾಢ ಸಮಾಧಿಸ್ಥರಾದರು. ಶ್ರೀರಾಮಕೃಷ್ಣರು ಪೂಜೆ ಮಾಡುತ್ತಿರುವಾಗ ಭಾವಪರವಶರಾಗಿದ್ದರು. ಈಗ ಅವರೂ ಗಾಢ ಸಮಾಧಿಸ್ಥರಾದರು. ಪೂಜ್ಯ-ಪೂಜಕರಿಬ್ಬರೂ ಇಂದ್ರಿಯ ರಾಜ್ಯವನ್ನು ಅತಿಕ್ರಮಿಸಿ ಆತ್ಮಭಾವದಲ್ಲಿ ಒಂದಾದರು. ಸತ್-ಚಿತ್-ಆನಂದ ಸ್ವರೂಪದಲ್ಲಿ ತಾದಾತ್ಮ್ಯ ಹೊಂದಿದರು. ಆ ಗಾಢ ಸಮಾಧಿ ಸ್ಥಿತಿಯಲ್ಲಿ ಸುದೀರ್ಘ ಸಮಯ ಕಳೆಯಿತು. ಉಪನಿಷತ್ತು ಹೇಳುವಂತೆ ಒಂದು ಬಿಂದು ಶುದ್ಧವಾದ ನೀರು ಮತ್ತೊಂದು ಶುದ್ಧ ನೀರಿನಲ್ಲಿ ವಿಲೀನವಾಯಿತು. ಪೂಜೆ ಮುಗಿದ ನಂತರ ಬಾಹ್ಯಾವಸ್ಥೆಯಲ್ಲಿ ಅದೇ ಶುದ್ಧ ಆತ್ಮ ಮತ್ತೆ ಶ್ರೀರಾಮಕೃಷ್ಣ, ಶಾರದೆಯಾಗಿ ಹಿಂದಿರುಗಿತು. ಶ್ರೀಮಾತೆ ಮನಸ್ಸಿನಲ್ಲೇ ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ, ತಮ್ಮ ಕೊಠಡಿಗೆ ಹಿಂದಿರುಗಿದರು.

ಅಂದು ಶ್ರೀಮಾತೆಯವರ ಮೂರು ಭಾವಗಳು ಆ ದೇಹದಲ್ಲಿ ಪ್ರಕಟವಾಯಿತು. ಮೊದಲನೆಯದು ಶ್ರೀರಾಮಕೃಷ್ಣರ ಪತ್ನಿಯಾಗಿ, ಶ್ರೀಮಾತೆ ಆ ಕೊಠಡಿಗೆ ಬಂದು ಆಸನದಲ್ಲಿ ಕುಳಿತರು. 'ನಾನು ನಾನಾಗಿರಲಿಲ್ಲ' ಎಂಬ ಹೇಳಿಕೆಯಿಂದ ಪೂಜೆಯ ಸಮಯದಲ್ಲಿ ಸಾಕ್ಷಾತ್ ಷೋಡಶಿಯಾಗಿ ಪೂಜೆ ಸ್ವೀಕರಿಸಿದುದು ಎರಡನೆಯ ಭಾವವಾದರೆ, ಪೂರ್ಣಾಹುತಿಯ ಸಮಯದಲ್ಲಿ ಇಬ್ಬರೂ ಗಾಢ ಸಮಾಧಿಸ್ಥರಾಗಿ ಸತ್-ಚಿತ್-ಆನಂದ ಸ್ವರೂಪದಲ್ಲಿ ತಾದಾತ್ಮ್ಯ ಹೊಂದಿದ್ದಾಗ, ಆ ನಿರ್ವಿಕಲ್ಪ ಸಮಾಧಿಯಲ್ಲಿ ನಿರ್ಗುಣ ಬ್ರಹ್ಮಾವಸ್ಥೆಯಲ್ಲಿದ್ದುದು ಮೂರನೆಯ ಭಾವವಾಗಿತ್ತು.

ಹೀಗೆ ಷೋಡಶೀ ಪೂಜೆಯ ದಿನ ಶ್ರೀಮಾತೆಯ ಜೀವನದ